ನಿರಂತರ ಪ್ರಾಕೃತಿಕ ಬದಲಾವಣೆಗಳಿಗೆ ಸಿಲುಕಿ ಹಾನಿಗೆ ಒಳಗಾಗುವುದರಿಂದ ರಕ್ಷಿಸುತ್ತಿದೆ ಎಂದೂ ವಿಶ್ಲೇಷಿಸಲಾಗುವುದರಿಂದ, 'ಹಾಲು ಕುಡಿದ್ರೂ ಲಾಭ, ಮೈಮೇಲೆ ಹಚ್ಕೊಂಡ್ರೂ ಲಾಭ' ಎಂದು ಇನ್ನೊಂದು ಗಾದೆ ಟಂಕಿಸಬಹುದೇನೋ? ಶಾಲಾಮಕ್ಕಳಿಗೆ, ಗರ್ಭಿಣಿಯರಿಗೆ, ಬೆಳೆಯುವ ಮಕ್ಕಳಿಗೆ, ಅಶಕ್ತರಿಗೆ ಮೊದಲು ಹಾಲು ನೀಡಬೇಕೆನ್ನುವುದಿದೆ. 'ರೋಗಿ ಬಯಸಿದ್ದೂ ಹಾಲು, ಅನ್ನ ವೈದ್ಯ ಹೇಳಿದ್ದೂ ಹಾಲು ಅನ್ನ' ಎನ್ನುವ ಹಳೆಯ ಗಾದೆಮಾತೇ ಇದೆಯಲ್ಲ!

ತನ್ನ ಒಂದು ಲೀಟರ್ ಹಾಲಿಗೆ ಸುಮಾರು ಎಂಟ್ಹತ್ತು ಸಾವಿರ ರೂಪಾಯಿ ಬೆಲೆ ಇರುವಾಗ ಕತ್ತೆಗೆ ಸಹಜವಾಗಿ ಜಂಭ ಬರುವುದಿಲ್ಲವೇ? ಎಂದು ಮನುಷ್ಯರ ಬುದ್ಧಿಯಿಂದ ಯೋಚಿಸಿದ್ರೆ, ನಾವೇನಾದ್ರೂ ಅಷ್ಟು ಬೆಲೆಬಾಳುವವರಾಗಿದ್ರೆ, ಕೊಂಬು ಬೆಳೆಸಿಕೊಳ್ಳುತ್ತಿದ್ದೆವೆನಿಸುತ್ತದೆ! ಆದರೆ, ನನಗೇಕೆ ಕೊಂಬು–ಕಹಳೆಯ ಉಸಾಬರಿ ಎಂದು ಕತ್ತೆ ಮೂಗು ಮುರಿಯುತ್ತಾ, ತನ್ನ ಪಾಡಿಗೆ ತಾನು ಕಾಯಕಯೋಗಿಯಾಗಿ ನಿಶ್ಚಿಂತೆಯಿಂದ ಚಾಕರಿ ಮಾಡಿಕೊಂಡಿರಬಹುದು.

'ಕತ್ತೆ ಚಾಕರಿ' ಮಾಡಿ ಗಳಿಸಿದ ದಿನದ ದುಡಿಮೆಯನ್ನು 'ಕುದುರೆ ರೇಸ್' ಎಂಬ ಅದೃಷ್ಟದ ಜೂಜಿನಾಟಕ್ಕೆ ಸುರಿದು, 'ಕುದುರೆ ಬಾಲ' ಹಿಡಿದವ ಕ್ಷಣಮಾತ್ರದಲ್ಲಿ ಭಿಕ್ಷಾಧಿಪತಿ ಆಗುವುದರಲ್ಲಿ ಕತ್ತೆಯ ತಪ್ಪೇನಿರುವುದಿಲ್ಲ. ಹಾಗೇ ಜೂಜಿನ ಮನೆಯಲ್ಲಿ ಜವಾಬ್ದಾರಿ ಮರೆತು ಮೋಜು ಮಾಡುವವರು ನಿರ್ಗತಿಕರಾಗಿರುವುದಕ್ಕೆ ಕುದುರೆಯೂ ಕಾರಣವಾಗುವುದಿಲ್ಲ. ಹಾಗಾಗಿ ಮೋಜಿನ ಕುದುರೆ ಬಾಲ ಹಿಡಿಯದೆ, ಶ್ರಮದ ಕತ್ತೆಯ ಹಿಂಬಾಲಕರಾದರೆ, ಅದೃಷ್ಟ 'ಖುಲ್ ಜಾ ಸಿಮ್ ಸಿಮ್' ಎಂದು ಯಾವ ಹೊತ್ತಿಗಾದರೂ ಬಾಗಿಲು ತಟ್ಟಬಹುದು. ಆನೆಬಾಲದ ಕೂದಲಿಗೆ ಚಿನ್ನದ ಚೌಕಟ್ಟು ಹಾಕಿಸುವಂತೆ ಕತ್ತೆ ಬಾಲ ಹಿಡಿದು ಶ್ರಮದಿಂದ ದುಡಿದರೆ, ಕತ್ತೆ ಬಾಲಕ್ಕೂ ಬಂಗಾರದ ಮೌಲ್ಯವಿರುವುದನ್ನು ಕಾಣಬಹುದು.



ಕತ್ತೆಬಾಲ, ಕತ್ತೆಯ ಹಾಲಿನ ವಿಚಾರಗಳು ಹೀಗೆ ಮೌಲ್ಯೀಕರಣಕ್ಕೆ ಒಳಪಟ್ಟ ಮೇಲೆ, 'ಕತ್ತೆಬಾಲ, ಕುದುರೆ ಜುಟ್ಟು' ಹೇಳಿಕೆಯಲ್ಲಿರುವ ಕುದುರೆ ಜುಟ್ಟಿನ ವಿಷಯಕ್ಕೆ ಬರೋಣ. ಕೇಶಾಲಂಕಾರದ ವಿವಿಧ ಬಗೆಗಳಲ್ಲಿ 'ಪೋನಿ ಟೇಲ್' ಎಂಬುದು ಜನಪ್ರಿಯ ಮಾದರಿ. ಮಕ್ಕಳಿಂದ ಹರಯದ ಹೆಂಗಳೆಯರವರೆಗೆ 'ಕುದುರೆ ಜುಟ್ಟು' ಕಟ್ಟಿಕೊಳ್ಳುವುದು ತುಂಬಾ ಸುಲಭವೂ ಆರಾಮದಾಯಕವೂ ಆದ ಕೇಶವಿನ್ಯಾಸ. ರಾಶಿ ಕೂದಲನ್ನು ಮುಷ್ಟಿಯಲ್ಲಿ ಹಿಡಿದು ರಬ್ಬರಿನೊಳಗೆ ಬಂಧಿಸಿದರೆ, ಪೋನಿಟೇಲ್ ರೆಡಿ! ಕುದುರೆಯ ಬಾಲ ಎಷ್ಟು ಮೋಹಕವಾಗಿರುವುದೋ ಅಷ್ಟೇ ಸೊಗಸಾಗಿ ಇದೂ ಕಾಣುತ್ತದೆ. ಆದರೆ ಜನರು ಕುದುರೆ ಬಾಲ ಕಟ್ಟಿಕೊಂಡಿದ್ದಾರೆ ಎಂದು ಹೇಳುವಂತಿಲ್ಲವಲ್ಲ! ಜೊತೆಗೆ, 'ಮಂಗನಿಂದ ಮಾನವ' ಎಂಬ ಸಿದ್ಧಾಂತಕ್ಕೆ ಭಿನ್ನವಾಗಿರುವ ಮನುಷ್ಯರಿಗೆ, ಬಾಲ ಇಲ್ಲದೇ ಇರುವುದರಿಂದ ಹಾಗೂ ಈ ಜುಟ್ಟು ತಲೆ ಮೇಲಿರೋದ್ರಿಂದ್ರ ಇದಕೆ ಕುದುರೆ ಜುಟ್ಟು ಎನ್ನುವುದು ಎಂಬ ಸಮರ್ಥನೆ ನೀಡಬಹುದು. ಆದರೆ, ಮನುಷ್ಯರಿಗೆ ತಲೆ ಮೇಲೆ ಜುಟ್ಟು ಇರುವುದಕ್ಕಿಂತಲೂ ಕೊಂಬು ಇರುವುದು ಜಾಸ್ತಿಯಾಗುತ್ತಿದೆ. ಕೊಂಬಿನ ಜೊತೆಗೆ ಮೈಮನಗಳಲ್ಲಿ ಕೊಬ್ಬೂ ಹೆಚ್ಚಾಗಿ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿರುವುದೂ ಉಂಟೆಂದು ಈಗೀಗ ಹೆಚ್ಚೇ ಸಾಬೀತಾಗುತ್ತಿದೆ.

ವೈದ್ಯರು ಗುಡ್ ಕೊಲೆಸ್ಟ್ರಾಲ್ ಇರಬೇಕೆನ್ನುವುದರಿಂದ ಮನುಷ್ಯರಿಗೆ ಕೊಬ್ಬು ಇರುತ್ತೆ ಬಿಡಿ. ಆದರೆ, ಸದೃಢ ಮೈಕಟ್ಟಿನ ಕುದುರೆಗಳಿಗೆ ಅಷ್ಟು ಕೊಬ್ಬು ಬೇಕಿರುವುದಿಲ್ಲ. ಕೊಬ್ಬಿನ ಬದಲು ಕುದುರೆ ಕೊಂಬು ಇರುವುದು ಸೂಕ್ತವೇನೋ? ಕುದುರೆಗೆ ಎಷ್ಟು ಕೊಂಬು! ಕುದುರೆಗೆ ಕೊಂಬಿರುತ್ತಾ? ಎನ್ನುವಂತಿಲ್ಲ. ಕನ್ನಡದಲ್ಲಿ ಕುದುರೆ ಬರೆಯುವಾಗ 'ಕ' ಗೆ ಒಂದು ಕೊಂಬು, 'ದ'ಗೆ ಒಂದು ಕೊಂಬು ಕೊಟ್ಟರೇ ಅದು ಕುದುರೆ ಆಗೋದು. ಅಂದರೆ, ಕುದುರೆಗೆ ಕನ್ನಡದಲ್ಲಿ ಎರಡು ಕೊಂಬು ಇದೆ ಅಂತಾಯ್ತು! ಅಷ್ಟೇ ಅಲ್ಲ, 'ಯೂನಿಕಾರ್ನ್' ಎನ್ನುವ 'ಏಕಶೃಂಗಿ' ಕಾಲ್ಪನಿಕ ಪ್ರಾಣಿಯ ಚಿತ್ರವನ್ನೂ ನಾವಿಲ್ಲಿ ನೆನೆಯಬಹುದು. ಅದರ ಲೆಕ್ಕ ಹಿಡಿದರೆ, ಆ ಯೂನಿಕಾರ್ನ್ ಕುದುರೆಗೆ ಒಂದೇ ಕೊಂಬು! 'ಕೊಂಬಿರುವ 'ಕುದುರೆ' ಒಂದು ಅವಾಸ್ತವಿಕ ವಿಚಾರ. ವಾಸ್ತವದಲ್ಲಿ ಬಹಳ ಬಿಗುಮಾನ ತೋರುವವರಿಗೆ, 'ಅವರಿಗೇನು ಕೊಂಬಿದ್ಯಾ?' ಎಂದೇ ಕೇಳುವುದುಂಟು. ಕೊಂಬಿಗೂ ಕೊಬ್ಬಿಗೂ ಅಂಥಾ ವ್ಯತ್ಯಾಸವೇನಿಲ್ಲ ಬಿಡಿ. ಶೂನ್ಯ ತೆಗೆದು ಒತ್ತೊಂದು ಕೊಟ್ಟರೆ 'ಕೊಂಬು', 'ಕೊಬ್ಬು' ಮಾರ್ಪಾಡುತ್ತದೆ. ಆದರೆ, ಬದುಕಿನಲ್ಲಿ ಹಾಗೆ ಶೂನ್ಯರಾಗುವುದು ತೀರಾ ಸುಲಭವಲ್ಲ.

'ರಾಯರ ಕುದುರೆ ಬರ್ತಾ ಬರ್ತಾ ಕತ್ತೆ ಆಯ್ತು' ಎನ್ನುವ ಮಾತಿದೆ. ಸಂಪೂರ್ಣ ಸಾಮರ್ಥ್ಯ ಬಳಸಿಕೊಳ್ಳದೇ ಸೋಮಾರಿಗಳಾಗಿ ಕಾಲಕ್ಷೇಪ ಮಾಡುವವರನ್ನು ಕುರಿತು ಈ ಮಾತನ್ನು ಹೇಳಲಾಗುತ್ತದೆಯೇ ಹೊರತು, ಕತ್ತೆಯು ಕುದುರೆಗಿಂತ ಕಡಿಮೆ ದರ್ಜೆಯ ಪ್ರಾಣಿ ಎಂಬರ್ಥದಲ್ಲಿ ಅಲ್ಲ. ಹಾಗೆ ನೋಡಿದರೆ, ಅತ್ಯಂತ ಹೆಚ್ಚು ಮೈ ಮುರಿದು ದುಡಿಯುವವರು 'ಕತ್ತೆ ದುಡಿಯುವ ಹಾಗೆ ದುಡಿದೆ' ಎಂದು ಹೇಳಿಕೊಳ್ಳುವುದರಲ್ಲಿ ಶ್ರಮದ ಮೌಲ್ಯ ಅಡಗಿರುವುದನ್ನು ಕಾಣಬಹುದು. ಇದರ ಜೊತೆಗೆ 'ಕತ್ತೆ ಚಾಕರಿ' ಮಾಡಿದ್ರೂ ಪ್ರಯೋಜನವಿಲ್ಲ ಎನ್ನುವಲ್ಲಿ, ಕತ್ತೆಯನ್ನು ಕೇವಲ ದೈಹಿಕ ಶ್ರಮ ಬೇಡುವ ಕೆಲಸಗಳಿಗೆ ಉಪಯೋಗಿಸಿಕೊಳ್ಳುವ ಬಗ್ಗೆ ಸಣ್ಣ ತಕರಾರಿರುವುದನ್ನೂ ಗಮನಿಸಬಹುದು.

ಇಷ್ಟೆಲ್ಲ 'ಕತ್ತೆ(ಟ್ಟೆ) ಪುರಾಣ' ಮಾತನಾಡಿದ ಮೇಲೆ, 'ಕತ್ತೆ' ಎಂದು ಕರೆಯಲಾಗುವ ಪ್ರಾಣಿಯು ಸ್ವಾಭಾವಿಕವಾಗಿ ಅತ್ಯಂತ ಸೂಕ್ಮಬುದ್ಧಿ ಉಳ್ಳದ್ದು, ಒಮ್ಮೆ ಹಟ ಹಿಡಿದು ಮೊಂಡಾಟ ಶುರು ಮಾಡಿದರೆ, 'ಅಪ್ಪಯ್ಯಾ' ಎಂದರೂ 'ಜಪ್ಪಯ್ಯಾ' ಎಂದರೂ ಜಗ್ಗದು ಈ ಜೀವಿ ಎಂಬುದನ್ನು ಮರೆಯುವಂತಿಲ್ಲ. ಕತ್ತೆಯಿಂದ ಹೇಗಾದರೂ ಕೆಲಸ ತೆಗೆದೇ ತೀರಬೇಕೆಂದು ಹಟ ಹಿಡಿದರೆ, 'ಜಾಡಿಸಿ ಒದೆ...' ಎಂದು ಅದು ಅಣ್ಣಾವ್ರ ಹಾಡಿಂದ ಪ್ರೇರಣೆಗೊಂಡು ಒದೆತ ಕೊಟ್ಟರೆ ಕತೆ ಮುಗಿದಂತೆ! ಮೂಳೆ ಹಾಗೂ ಹಲ್ಲಿನ ವೈದ್ಯರ ಬಳಿ ಹೋಗಿ 'ವೈದ್ಯೋ ನಾರಾಯಣೋ ಹರಿ' ಎಂದು ಜಪಿಸಬೇಕಾದೀತು.

ಪ್ರತಿಕ್ರಿಯಿಸಿ: feedback@sudha.co.in